ದಿನಾಂಕ 13-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಹೆಚ್ಚುವರಿ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಹೆಚ್.ಎಸ್ ವಕೀಲರಿಂದಃ**

ನಿ.ಪಿ-15 ರಿಂದ ನಿ.ಪಿ-17 ರ ದಾಖಲೆಗಳ ಮೇಲೆ ಯಾವುದೇ ಹೆಚ್ಚುವರಿಯಾಗಿ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಎಸ್.ಬಿ.ಕೆ ವಕೀಲರಿಂದ ಶ್ರೀ ಬಿ.ಎಸ್.ಎ ವಕೀಲರ ಪರವಾಗಿ**

ನಾನು ಸೊರಬ ತಾಲೂಕಾ ಬಿಳಗಲಿ ಗ್ರಾಮದಲ್ಲಿ ವಾಸವಿದ್ದೇನೆ. ನಾನು ಸದರಿ ಗ್ರಾಮದಲ್ಲಿ ಸುಮಾರು 40 ವರ್ಷಗಳಿಂದ ವಾಸವಿದ್ದೇನೆ. ನನ್ನ ಮದುವೆ ಆದ ನಂತರ ನಾನು ನನ್ನ ಗಂಡ ಮತ್ತು ಮಕ್ಕಳ ಜೊತೆಯಲ್ಲಿ ಸದರಿ ಗ್ರಾಮದಲ್ಲಿ ವಾಸವಿದ್ದೇನೆ. ಸಾಕ್ಷಿಯು ಮುಂದುವರೆದು ನಾನು ಸಾವೀಕೆರೆಗೆ ಹೋಗಿ ಬರುವುದು ಮಾಡಿರುತ್ತೇನೆ ಎನ್ನುತ್ತಾರೆ. ಸಾವೀಕೇರಿ ಗ್ರಾಮದಲ್ಲಿ ಇರುವ ಜಾತ್ರೆ ಹಾಗೂ ಹಬ್ಬಗಳಿಗೆ ನಾನು ಹೋಗಿ ಬರುವುದು ಮಾಡಿರುತ್ತೇನೆ. ನನ್ನ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ನೆನಪಿಲ್ಲ.

2. ನನ್ನ ತಂದೆ ಯಲ್ಲಪ್ಪ ಹಾಗೂ ತಾಯಿ ಕೆಂಚವ್ವ ರವರಿಗೆ 4 ಜನ ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು. 5 ಜನ ಹೆಣ್ಣು ಮಕ್ಕಳಲ್ಲಿ ನಮ್ಮ 3 ಜನರ ಮದುವೆ ಆಗಿರುತ್ತದೆ. ಇಬ್ಬರು ಹೆಣ್ಣು ಮಕ್ಕಳು ಮನೆಯಲ್ಲಿ ಇದ್ದಾರೆ, ಅವರಲ್ಲಿ ಒಬ್ಬರು ಹಿರಿಯವ್ವ ಎಂಬುವವರಿಗೆ ಹುಚ್ಚು ಹಿಡಿದಿರುತ್ತದೆ ಹಾಗೂ ಮಂಜವ್ವ ಅವರು ಜೋಗಮ್ಮ ಆಗಿರುತ್ತಾರೆ. ಹಿರಿಯವ್ವರವರು ಹುಟ್ಟನಿಂದಲೂ ಅದೇ ರೀತಿ ಇರುತ್ತಾರೆ. ಅವರನ್ನು ಮಂಜವ್ವ ರವರು ನೋಡಿಕೊಳ್ಳುತ್ತಾರೆ.



3. 3 ನೇ ವಾದಿರವರಿಗೆ ಹುಚ್ಚು ಇರುವುದರಿಂದ ಅವರ ಪರವಾಗಿ ದಾವೆಯನ್ನು ಸಲ್ಲಿಸಲು ಮಾನ್ಯ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿರುತ್ತೇವೆ. ದಾವಾ ಸಲ್ಲಿಸುವ ಸಮಯದಲ್ಲಿ

3 ನೇ ವಾದಿಯವರು ಹುಚ್ಚು ಇರುವ ಬಗ್ಗೆ ಹಾಗೂ ಅವರನ್ನು 2 ನೇ ವಾದಿಯವರು ಜೋಪಾನ ಮಾಡುತ್ತಿರುವ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನಮ್ಮ ವಕೀಲರು ದಾವೆಯಲ್ಲಿ ನಮೂದಿಸಿರುತ್ತಾರೆ. 3 ನೇ ವಾದಿಯವರು ತಮ್ಮ ಕೆಲಸವನ್ನು ಮಾಡಿಕೊಳ್ಳಲು ಬೇರೆಯವರ ಮೇಲೆ ಅವಲಂಬಿಸಿರುತ್ತಾರೆ.

4. ಸದರಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ, ಅವುಗಳಲ್ಲಿ ಯಾರ್ಯಾರ ಹೆಸರು ನಮೂದಾಗಿರುತ್ತದೆ ಎಂಬ ಬಗ್ಗೆ ನಾನು ನೋಡಿರುವುದಿಲ್ಲ. ನಾನು ಸದರಿ ದಾವೆಯನ್ನು 7 ಜಮೀನುಗಳಿಗೆ ಸಂಬಂಧಿಸಿದಂತೆ ಹಾಗೂ 4 ಮನೆಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ದಾವೆಯಲ್ಲಿ ನಮೂದಿಸಿರುವ ಎಲ್ಲಾ ಜಮೀನುಗಳ ಚಕ್ಕುಬಂದಿಗಳು ನನಗೆ ಗೊತ್ತಿಲ್ಲ. ದಾವೆಯಲ್ಲಿ ನಮೂದಿಸಿರುವ ಎಲ್ಲಾ ಜಮೀನುಗಳಲ್ಲಿ ನಾವು ಎಲ್ಲರೂ ವಹಿವಾಟನ್ನು ಮಾಡುತ್ತಿದ್ದೇವೆ. ಸ ನಂಃ 345/1, ಸ ನಂಃ 30/1 ಹಾಗೂ ಸ ನಂಃ 89/2 ಜಮೀನುಗಳು ಇಲ್ಲಿವರೆಗೂ ಸಹ ನಮ್ಮ ತಂದೆಯವರ ಹೆಸರಿನಲ್ಲಿ ಇವೆ ಎಂದರೆ ಸರಿ. ಅದೇ ರೀತಿ ಜಿ ಪಿ ಸಿ ನಂಃ 32 ಹಾಗೂ 31 ಇಲ್ಲಿವರೆಗೂ ನಮ್ಮ ತಂದೆಯವರ ಹೆಸರಿನಲ್ಲಿ ಇವೆ ಎಂದರೆ ಸರಿ.

5. ಸ ನಂಃ 32/1 ನನ್ನ ತಮ್ಮನಾದ ಚಂದ್ರಶೇಖರವರಾದ 4 ನೇ ಪ್ರತಿವಾದಿ ರವರ ಹೆಸರಿನಲ್ಲಿ ಇದೆ ಎಂದರೆ ಈ ಬಗ್ಗೆ ಆತನು ನಮಗೆ ಏನೂ ತಿಳಿಸಿರುವುದಿಲ್ಲ. ಸ ನಂಃ 32/2 2 ನೇ ವಾದಿರವರ ಹೆಸರಿನಲ್ಲಿ ಇದೆ ಎಂದರೆ ಎಲ್ಲಾ ಜಮೀನುಗಳು ಜಂಟಿ ಖಾತೆಯಲ್ಲಿ



ಇರುತ್ತವೆ. ಸ ನಂಃ 89/1 ಜಮೀನು 1 ನೇ ಪ್ರತಿವಾದಿರವರ ಹೆಸರಿನಲ್ಲಿ ಇದೆ ಎಂದರೆ ಅದು ಸಹ ನಮ್ಮ ತಂದೆಯ ಹೆಸರಿನಲ್ಲಿತ್ತು. ಸ ನಂಃ 89/3 ಜಮೀನು 3 ನೇ ಪ್ರತಿವಾದಿರವರ ಹೆಸರಿನಲ್ಲಿ ಇದೆ ಎಂದರೆ ಅಷ್ಟು ಜಮೀನುಗಳು ಜಂಟಿ ಹೆಸರಿನಲ್ಲಿ ಇದ್ದು, ಅವರು ಈ ಬಗ್ಗೆ ಏನೂ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಜಿ ಪಿ ಸಿ ನಂಃ 32 ರಲ್ಲಿ 2 ಮತ್ತು 3 ನೇ ವಾದಿಯವರು ವಾಸವಿದ್ದಾರೆ. ಜಿ ಪಿ ಸಿ ನಂಃ 31 ರಲ್ಲಿ ಯಾರು ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಬಿ ಶೆಡ್ಯೂಲ್ ಆಸ್ತಿಗಳಾದ ಕ್ರಮ ಸಂಖ್ಯೆ3 ಹಾಗೂ 4 ಜಿ ಪಿ ಸಿ ನಂಃ 66/ಎ ರಲ್ಲಿ ಯಾರು ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ.

6. ನಿ.ಪಿ–10 ರ ಪ್ರಕಾರ ಜಿ ಪಿ ಸಿ ನಂಃ 66/ಎ ರಲ್ಲಿ ನೇತ್ರಾ ಕೋಂ ನಾಗೇಂದ್ರಪ್ಪ ಅರಳೇಶ್ವರ ರವರ ಹೆಸರು ನಮೂದು ಆಗಿರುತ್ತದೆ, ಅವರು ನನ್ನ ತಮ್ಮನ ಹೆಂಡತಿ. ಜಮೀನುಗಳ ಹಾಗೂ ಮನೆಗಳ ಉತಾರಗಳನ್ನು ನಾವೇ ಪಡೆದುಕೊಂಡು ನಮ್ಮ ವಕೀಲರಿಗೆ ನೀಡಿರುತ್ತೇವೆ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಸದರಿ ದಾಖಲಾತಿಗಳನ್ನು ತೆಗೆಸಿಕೊಂಡಿರುತ್ತೇವೆ. ಈ ದಾವೆಯಲ್ಲಿ ಶ್ರೀಮತಿ ನೇತ್ರಾ ಕೋಂ ನಾಗೇಂದ್ರಪ್ಪರವರನ್ನು ಸೇರಿಸಿರುವುದಿಲ್ಲ. ಅವರನ್ನು ಯಾವ ಕಾರಣಕ್ಕೆ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಗಂಡು ಮಕ್ಕಳಿಗೆ ಮಾತ್ರ ಸದರಿ ದಾವೆಯಲ್ಲಿ ಸೇರಿಸಿರುತ್ತೇವೆ, ಅವರ ಹೆಸರು ಉತಾರದಲ್ಲಿ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

7. 66 ಆಸ್ತಿ ಮೂಲತಃ ಹೇಗೆ ಬಂದಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 66 ಆಸ್ತಿಯನ್ನು ನನ್ನ ತಮ್ಮ ನಾಗೇಂದ್ರಪ್ಪ ರವರು ಖರೀದಿಯನ್ನು ಮಾಡಿದಿರುವುದಿಲ್ಲ, ಅದು ಮೂಲತಃ ನನ್ನ ತಂದೆಯ ಆಸ್ತಿ ಇರುತ್ತದೆ. ನನ್ನ ತಂದೆಯವರ ಹೆಸರಿನಲ್ಲಿ ಸದರಿ ಆಸ್ತಿ ಇತ್ತು ಎಂಬ ಬಗ್ಗೆ ತೋರಿಸಲು ದಾಖಲಾತಿಗಳನ್ನು



ಹಾಜರುಪಡಿಸಿರುತ್ತೇನೆ. ಶ್ರೀಮತಿ ನೇತ್ರಾ ಅವರ ಹೆಸರು ಯಾವ ವರ್ಷದಲ್ಲಿ ದಾಖಲಾಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗಳಲ್ಲಿ ಯಾವುದೇ ಬೋರ್ ವೆಲ್ ಗಳು ಇರುವುದಿಲ್ಲ. ಸದರಿ ಜಮೀನುಗಳಲ್ಲಿ ನಮ್ಮ ತಂದೆಯ ಸಮಯದಲ್ಲಿ ಭತ್ತವನ್ನು ಬೆಳೆಯುತ್ತಿದ್ದರೂ, ಈಗಲೂ ಸಹ ಭತ್ತವನ್ನು ಬೆಳೆಯುತ್ತಿರಬಹುದು. 4 ನೇ ಪ್ರತಿವಾದಿಯವರಿಗೆ ಮಧ್ಯಪಾನ ಮಾಡುವ ಚಟ ಇರುವುದರಿಂದ ಅವರ ಮದುವೆ ಆಗಿರುವುದಿಲ್ಲ. 4 ನೇ ಪ್ರತಿವಾದಿಯವರು ಆರೋಗ್ಯವಂತರು ಆಗಿರುವುದಿಲ್ಲ, ಅಲ್ಲಿ ಇಲ್ಲಿ ಕುಡಿದು ಬಿದ್ದಾಗ 2 ನೇ ವಾದಿಯವರೇ ಅವರನ್ನು ನೋಡಿಕೊಳ್ಳುತ್ತಾರೆ.

8. 1 ರಿಂದ 3 ನೇ ಪ್ರತಿವಾದಿಯವರ ಮನೆಯ ವ್ಯವಹಾರಗಳನ್ನು ಅವರವರೇ ನೋಡಿಕೊಳ್ಳುತ್ತಾರೆ. ನಮ್ಮ ತಂದೆ ಇರುವಾಗಲೇ ಸದರಿಯವರು ಮದುವೆ ಆದ ನಂತರ ಬೇರೆ ಬೇರೆ ಆಗಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಯವರು ಸಾವೀಕೇರಿ ಗ್ರಾಮದಲ್ಲಿ ಇದ್ದಾರೆ. 2 ನೇ

ಪ್ರತಿವಾದಿಯ ಹೆಂಡತಿ ಊರು ಸಾವೀಕೇರಿ, 3 ನೇ ಪ್ರತಿವಾದಿಯವರ ಹೆಂಡತಿ ಊರು ಶಂಕ್ರಿಕೊಪ್ಪ ಗ್ರಾಮ ಹಾಗೂ 1 ನೇ ಪ್ರತಿವಾದಿಯವರ ಹೆಂಡತಿ ಊರು ಅಕ್ಕೀವಳ್ಳಿ ಗ್ರಾಮ. 1 ರಿಂದ 3 ನೇ ಪ್ರತಿವಾದಿಯವರ ಹೆಂಡತಿಯವರು ಮದುವೆ ಆದ ನಂತರ ಅವರ ಗಂಡನ ಮನೆಯಲ್ಲಿ ವಾಸವಿದ್ದರು, ಸುಮಾರು 20 ವರ್ಷಗಳಕಾಲ ತಮ್ಮ ತವರು ಮನೆಯಲ್ಲಿ ಸೇರಿಕೊಂಡು ಈಗ ಸಾವೀಕೇರಿ ಊರಿಗೆ ಬಂದು ವಾಸವಿದ್ದಾರೆ. ಈ ವಿಚಾರವನ್ನು ನನ್ನ ವಾದ ಪತ್ರದಲ್ಲಿ ನಮೂದಿಸಿರುತ್ತೇನೆ.

9. ಸ ನಂಃ 30/1 ನಮ್ಮ ಕುಟುಂಬಕ್ಕೆ ಹೇಗೆ ಬಂದಿರುತ್ತದೆ ಎಂಬ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಸ ನಂಃ 89 ರ ಒಟ್ಟು ಕ್ಷೇತ್ರ ಎಷ್ಟು ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಸ ನಂಃ 89 ಎಷ್ಟು ಹಿಸ್ಸೇಗಳಲ್ಲಿ ವಿಂಗಡ ಆಗಿರುತ್ತದೆ ಎಂಬ ಬಗ್ಗೆ



ನನಗೆ ಗೊತ್ತಿಲ್ಲ. ಆದರೆ 3 ಹಿಸ್ಸೇಗಳಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಇರುತ್ತಾರೆ. ಪ್ರತಿಯೊಬ್ಬರೂ ತಲಾ 3 ಎಕರೆ 27 ಗುಂಟೆ ಹಂಚಿಕೊಂಡಿರುತ್ತಾರೆಯೇ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸ ನಂಃ 30/1, 4 ಎಕರೆ 16 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. 4 ನೇ ಪ್ರತಿವಾದಿಯವರು ಅಲ್ಪವಯಸ್ಕರು ಇದ್ದಾಗಲೇ ಅವರಿಗೆ ಸ ನಂಃ 32 ರ ಪೈಕಿ 2 ಎಕರೆ 37 ಗುಂಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯವರು ಅಲ್ಪವಯಸ್ಕರು ಇರುವುದರಿಂದ ನಮ್ಮ ತಾಯಿ ಕೆಂಚವ್ವ ರವರೇ ಮೈನರ್ ಗಾರ್ಡಿಯನ್ ಇದ್ದರು. ಅದೇ ಸಮಯದಲ್ಲಿ ಸ ನಂಃ 32/2 ನ್ನು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

10. ನನ್ನ ತಂದೆಯವರು ಜೀವಂತ ಇದ್ದಾಗಲೇ ಆಪಸಾತ್ ವಾಟ್ನಿ ಸ್ಮರಣಾರ್ಥ ಟಿಪ್ಪಣಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಪಸಾತ್ ವಾಟ್ನಿ ಸ್ಮರಣಾರ್ಥ ಟಿಪ್ಪಣಿ ಪ್ರಕಾರ ಸಾವೀಕೇರಿ ಗ್ರಾಮದ ಡ ನಂಃ 639 ನಮೂದಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಡ ನಂಬರ್ ನಮೂದು ಮಾಡುವ ಸಮಯದಲ್ಲಿ ಯಾವುದೇ ತಕರಾರುಗಳು ಬರದೇ ಇರುವುದರಿಂದ ಡ ನಂಬರ್ ನಮುದಾಗಿರುತ್ತದೆ ಎಂದರೆ ನಮಗೆ ಈ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಅದೇ ರೀತಿ ನಮಗೆ ಈ ಬಗ್ಗೆ ಕೇಳಿರುವುದಿಲ್ಲ. 40 ವರ್ಷಗಳ ಹಿಂದಿನಿಂದ ಇಲ್ಲಿವರೆಗೂ

ನಾವು ವಾದಿಗಳು ಹಾಗೂ 1 ರಿಂದ 4 ನೇ ಪ್ರತಿವಾದಿಯವರು ಒಟ್ಟು ಕುಟುಂಬದಲ್ಲಿ ಇರಲಿಲ್ಲ, ಮೊದಲು ಇದ್ದೆವು ಆ ನಂತರದಲ್ಲಿ ಬೇರೆ ಬೇರೆ ಮಾಡಿಕೊಂಡಿರುತ್ತಾರೆ.

11. ನನ್ನ ತಂದೆಯವರು ಜೀವಂತ ಇದ್ದಾಗ ಅವರ ಹೆಸರಿನಲ್ಲಿ ಇರುವ ಆಸ್ತಿಗಳಲ್ಲಿ ಅವರಿಗೆ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿ. ನನ್ನ ತಂದೆಯವರು ಜೀವಂತ ಇದ್ದಾಗಲೇ



ನಾವು ಸಹ ಬಂದು ಅವರ ಜೊತೆಯಲ್ಲಿ ಉಳುಮೆಯನ್ನು ಮಾಡುತ್ತಿದ್ದೆವು. ಮನೆತನದ ವ್ಯವಹಾರಗಳನ್ನು ನನ್ನ ತಂದೆಯವರು ಮಾಡುತ್ತಿದ್ದರು.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ